**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ</u>**

**ಸಿಸಿ ನಂ.383/2022**

| | | |
|---|---|---|
| ಪಿರ್ಯಾರ್ದುದಾರಃ | 1. | ಕರ್ನಾಟಕ ಸರ್ಕಾರದ ಪರ ಜೇವರ್ಗಿ ಪೋಲಿಸರು |
| | | **ವಿರುದ್ಧ** |
| ಆರೋಪಿತರು | 1 | ಬಸವರಾಜ ತಂದೆ ಶರಣಪ್ಪ ಭಂಡಾರಿ,<br>ವಃ 29 ವರ್ಷ, ಉಃ ಮೆಕ್ಯಾನಿಕ್ ಕೆಲಸ,<br>ಸಾ. ಗಂವಾರ, ತಾಃ ಜೇವರ್ಗಿ |
| | 2 | ನಿಂಗಣ್ಣಗೌಡ ತಂದೆ ಹೊನ್ನಪ್ಪಗೌಡ ನಂದಿಹಳ್ಳಿ,<br>ವಃ 42 ವರ್ಷ, ಉಃ ಖಾಸಗಿ ಕೆಲಸ,<br>ಸಾ. ವಿದ್ಯಾನಗರ ಜೇವರ್ಗಿ, ತಾಃ ಜೇವರ್ಗಿ |
| | 3 | ಮಹಾದೇವಪ್ಪ ತಂದೆ ಮರೆಪ್ಪ ಕಸನ,<br>ವಃ 28 ವರ್ಷ, ಉಃ ಕೂಲಿ ,<br>ಸಾ. ಗಂವಾರ, ತಾಃ ಜೇವರ್ಗಿ |

**<u>ಆಪಾದನೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್‌ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ

ದಿನಾಂಕ 26-01-2022 ರಂದು ಸಂಜೆ 05-00 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಗಂವ್ಹಾರ-ಚಿಗರಳ್ಳಿ ಕ್ರಾಸ್ ರಸ್ತೆಯ ಕೆನಾಲ್ ಹತ್ತಿರದ ಸಾರ್ವಜನಿಕ ಸ್ಥಳದ ಮೇಲೆ 1 ರಿಂದ 3ನೇ ಆರೋಪಿತರಾದ ನೀವು ನಿಮ್ಮ ಪಾಯಿದೆಗೋಸ್ಕರ ಸರಕಾರದಿಂದ ಯಾವುದೇ ಅನುಮತಿ ಇಲ್ಲದೇ ಕಾನೂನು ಬಾಹಿರವಾಗಿ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಜೂಜಾಟವನ್ನು ಆಡುತ್ತಿರುವಾಗ ಸಿಕ್ಕಿಬಿದ್ದ ಕಾರಣ ಕರ್ನಾಟಕ ಪೋಲಿಸ ಕಾಯಿದೆ ಕಲಂ 87 ರಡಿ ಶಿಕ್ಷಾರ್ಹ ಅಪರಾಧ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ 02-07-2025 ರಂದು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

1ನೇ ಆರೋಪಿ ಉತ್ತರಃ

2ನೇ ಆರೋಪಿ ಉತ್ತರಃ

3ನೇ ಆರೋಪಿ ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

1ನೇ ಆರೋಪಿ ಉತ್ತರಃ

2ನೇ ಆರೋಪಿ ಉತ್ತರಃ

3ನೇ ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಶ್ರೀಮತಿ ತಯ್ಯಬಾ ಸುಲ್ತಾನಾ)
ದಿಃ 02-07-2025
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ.